ಸಾಕ್ಷಿಯನ್ನು ದಿನಾಂಕಃ **06-03-2026** ರಂದು ಕರೆಯಿಸಿ ಪ್ರಮಾಣ ವಚನ ಮಾಡಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ ಶ್ರೀ. ಎಂ ಎಂ ಜೆ., ವಕೀಲರಿಂದಃ**

ಕುಮಟಾ ತಾಲ್ಲೂಕಿನ ಕುಜಳ್ಳಿಯಲ್ಲಿರುವ ಮನೆ ಕಟ್ಟಿ ಎಷ್ಟು ವರ್ಷ ಆಯಿತು ಎಂದು ನನಗೆ ಗೊತ್ತಿಲ್ಲ. ದಾವಾ 1 ನೇ ಸ್ಥಳದಲ್ಲಿ ಪ್ರತಿವಾದಿಯು ಮನೆಯನ್ನು 2005 ರಲ್ಲಿ ಕಟ್ಟಿದ್ದಾರೆ. ಸ.ನಂ.357/3 ರಲ್ಲಿ ಪ್ರತಿವಾದಿ 1 ರಿಂದ 3 ನೇ ಯವರು ಮನೆ ಕಟ್ಟಿಕೊಂಡಿದ್ದಾರೆ. ಪ್ರತಿವಾದಿ 2 ರವರು ಸ.ನಂ. 195/1 ರಲ್ಲಿ 2005 ರ ನಂತರ, ಸ.ನಂ. 195/2 ರಲ್ಲಿ ಪ್ರತಿವಾದಿ 3 ರವರು 2005 ರ ನಂತರ ಮನೆ ಕಟ್ಟಿಕೊಂಡಿದ್ದಾರೆ. ಪ್ರತಿವಾದಿಯವರು ಮನೆ ತೆರಿಗೆಯನ್ನು ನಾನ್ಯಾವತ್ತೂ ಕಟ್ಟಿದ್ದು ಇಲ್ಲ. ಕೂಜಳ್ಳಿಯಲ್ಲಿರುವ ಮನೆಯ ಮನೆ ತೆರಿಗೆಯನ್ನು ಪ್ರತಿವಾದಿಯರು ಕಟ್ಟಿಲ್ಲ ಎಂದರೆ ಸಾಕ್ಷಿಯು ಆ ಬಗ್ಗೆ ನನಗೆ ಗೊತ್ತಿಲ್ಲ ಎಂದು ನುಡಿದಿರುತ್ತಾರೆ. ಸ.ನಂ. 195/1 ಹಾಗೂ 2 ರಲ್ಲಿ ಪ್ರತಿವಾದಿ 1 ರಿಂದ 3 ಅನಾದಿಕಾಲದಿಂದ ಮನೆ ಕಟ್ಟಿಕೊಂಡು ರಿಪೇರಿ ಮಾಡಿಕೊಂಡು ಗ್ರಹಗಳನ್ನು ಕಟ್ಟಿಕೊಂಡು ಬಂದಿದ್ದಾರೆ ಎಂದರೆ ಸರಿಯಲ್ಲ. ಪ್ರತಿವಾದಿಯರು ವಾಸ್ತವ್ಯ ಮಾಡಿಕೊಂಡು ಬಂದ ಮನೆಗಳ ಕಬ್ಜಾ ಕೊಡಿಸಬೇಕೆಂದು ನಾನ್ಯಾವತ್ತೂ ಈ ದಾವೆಯಲ್ಲಿ ಮಾಗಣಿ ಕೋರಿದ್ದು ಇಲ್ಲ ಎಂದರೆ ಸರಿ. ನಾನು ಉದ್ದೇಶಪೂರ್ವಕವಾಗಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**1 ನೇ ಪ್ರತಿವಾದಿ ಪರ ಶ್ರೀ ಎಂ ಎಸ್ ಬಿ ವಕೀಲರು ಪ್ರತಿವಾದಿ 3 ಪರ ಶ್ರೀ ಎಂ ಎಂ ಜೆ ವಕೀಲರು ಮಾಡಿದ ಪಾಟೀ ಸವಾಲನ್ನೇ ಅಳವಡಿಸಿಕೊಂಡಿರುತ್ತಾರೆ.**

**ಮರು ವಿಚಾರಣೆ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತಗೊಳಿಸಲಾಯಿತು.)

ಓ ಹೆ ಕೇ ಸರಿ ಇದೆ.

-Sd/-

**ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಪ್ರ.ದ.ನ್ಯಾದಂ..**

**ಹೊನ್ನಾವರ.**